**1 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ  ಮೊಕದ್ದಮೆ  ನಂಃ 77/2024**

| | | |
|---|---|---|
| ಸಾಕ್ಷಿದಾರರ ಹೆಸರು | - ದಾಮೋದರ | ಪಿಡಬ್ಲ್ಯೂ- 04 |
| ತಂದೆಯ  ಹೆಸರು | - ಕೋಟೇಶ್ವರ | ಸಿಡಬ್ಲ್ಯೂ -07 |
| ವಯಸ್ಸು | - 45 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಎಂ.ಸಿ.ಹಳ್ಳಿ | |

ದಿನಾಂಕಃ  17-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಈ ಪ್ರಕರಣದ ಆರೋಪಿತರು ನನಗೆ ಗೊತ್ತಿಲ್ಲ, ನಾನು ಅವರನ್ನು ಈ ಹಿಂದೆ ನೋಡಿಲ್ಲ. ಫ್ರಾಸಾ.1 ರಿಂದ 3 ಮತ್ತು ಚಾಸಾ.6  ಗೊತ್ತು, ಅವರು ನಮ್ಮ ಊರಿನವರು.

2. ಆರೋಪಿತರಿಂದ ಫ್ರಾಸಾ.2 ರವರಿಗೆ ಏನು ತೊಂದರೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

3. ದಿಃ 22-02-2021 ರಂದು ಸಂಜೆ 4.30 ಗಂಟೆ ಸಮಯದಲ್ಲಿ

ನಮ್ಮ ಮನೆಯ ಸಮೀಪದಲ್ಲಿರುವ ಫ್ರಾಸಾ.2 ರವರ ಅಂಗಡಿಯ ಮುಂಭಾಗದಲ್ಲಿ ಜನರ ಗುಂಪು ಸೇರಿದ್ದು ಗಲಾಟೆಯಾಗುವ ಶಬ್ಧ ಕೇಳಿಸಿತು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿತರು ಫ್ರಾಸಾ.2 ರವರೊಂದಿಗೆ ಜಗಳ ಮಾಡುತ್ತಿದ್ದು, ಅವರ ಸೀರೆ ಹರಿದಿತ್ತು ಎಂದರೆ ಸರಿಯಲ್ಲ. ಆರೋಪಿತರು ಫ್ರಾಸಾ.2 ರವರಿಗೆ ಅಡಿಕೆ ಸಸಿಗಳನ್ನು ತೆಗೆದುಕೊಳ್ಳದಿದ್ದರೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ, ನೀವು ಅಡಿಕೆ ಸಸಿಗಳನ್ನು ತೆಗೆದುಕೊಳ್ಳದಿದ್ದರೆ ನಿಮ್ಮನ್ನು ಉಳಿಸುವುದಿಲ್ಲ, ನಾವು ನಿಮ್ಮ ಕುಟುಂಬದವರನ್ನು ನಾಶ ಮಾಡುತ್ತೇವೆ, ನೀವೇನಾದರು ಪೊಲೀಸರಿಗೆ ದೂರು ನೀಡಿದರೆ ನಿಮ್ಮ ಮೇಲೆ ಜಾತಿ ನಿಂದನೆ ಕೇಸು ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಾನು, ಫ್ರಾಸಾ.3 ಮತ್ತು ಚಾಸಾ.6 ರವರು ಸೇರಿ ಜಗಳವನ್ನು ಬಿಡಿಸಿದೆವು ಎಂದರೆ ಸರಿಯಲ್ಲ.

4. ನಂತರ ನಾವು ಫ್ರಾಸಾ.2 ರವರನ್ನು ವಿಚಾರಿಸಲಾಗಿ ಆಕೆ, ಸ್ವಲ್ಪ ಹೊತ್ತಿನ ಹಿಂದೆ ಆರೋಪಿತರು ನಮ್ಮ ಮನೆಯ ಹತ್ತಿರ ಹೋಗಿ ನನ್ನನ್ನು ಕರೆದು ಖಾಲಿ ಸೈಟಿನಲ್ಲಿ ಅಡಿಕೆ ಸಸಿಗಳನ್ನು ಯಾರು ಇಲ್ಲಿ ಇಟ್ಟಿದ್ದು ಇದು ನಮ್ಮ ಜಾಗ ಎಂದು ಹೇಳಿದರು, ಆಗ ನಾನು ಅಡಿಕೆ ಸಸಿಗಳು ನಮ್ಮದೇ ಅವುಗಳನ್ನು ನಾವು ನಮ್ಮ ಮನೆಯ ಹಿಂದೆ ಇಟ್ಟಿದ್ದೇವೆ ಎಂದು ಹೇಳಿದೆನು, ನಂತರ ನಾನು ನಮ್ಮ ಅಂಗಡಿಗೆ ಹೋದೆನು, ನಂತರ ಆರೋಪಿತರು ನಮ್ಮ ಅಂಗಡಿಯ ಬಳಿ ಬಂದು ನನ್ನನ್ನು ಕುರಿತು, ಆ ಜಾಗ ನಮ್ಮದು, ನೀವು ಅಡಿಕೆ ಸಸಿಗಳನ್ನು ತೆಗೆದುಕೊಳ್ಳಿ ಎಂದು ಅವಾಚ್ಯವಾಗಿ

ಬೈದು ನಮ್ಮ ಅಂಗಡಿಯಿಂದ ಹೊರಗೆ ಬಂದ ಪ್ರಾಸಾ.2 ರವರನ್ನು ಆರೋಪಿತರು ಸೂಳೆಮುಂಡೆ ಬೇವರ್ಸಿ ಮುಂಡೆ ಎಂದು ಬೈದು ಅವರ ಸೀರೆಯನ್ನು ಹಿಡಿದು ಎಳೆದಾಡಿ ಹರಿದರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ಆ ಬಗ್ಗೆ ಪ್ರಾಸಾ.1 ರವರು ಆರೋಪಿತರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

5. ದಿಃ 19-04-2021 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು.

6. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.8 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.